# ಪ್ರಾರ್ಥನೆ

## ಕುಂತಿಯ ಪ್ರಾರ್ಥನೆ

(ಭಾಗವತದಿಂದ)

ಶೃಣ್ವಂತಿ ಗಾಯಂತಿ ಗೃಣಂತ್ಯಭೀಕ್ಷ್ಣಶಃ
ಸ್ಮರಂತಿ ನಂದಂತಿ ತವೇಹಿತಂ ಜನಾಃ ।
ತ ಏವ ಪಶ್ಯಂತ್ಯಚಿರೇಣ ತಾವಕಂ
ಭವಪ್ರವಾಹೋಪರಮಂ ಪದಾಂಬುಜಮ್ ॥

ಯಾವ ಭಾಗ್ಯಶಾಲಿಗಳು ಬಾರಿ–ಬಾರಿಗೂ ನಿನ್ನ ದಿವ್ಯಲೀಲೆಗಳನ್ನು ಶ್ರವಣಮಾಡುತ್ತಾರೋ, ಗಾನಮಾಡುತ್ತಾರೋ, ಸಂಕೀರ್ತನೆ ಮಾಡುತ್ತಾರೋ, ಸ್ಮರಣೆಮಾಡುತ್ತಾರೋ, ಆ ಶ್ರವಣ–ಗಾನ–ಸಂಕೀರ್ತನ–ಸ್ಮರಣೆಗಳಿಂದ ಆನಂದಪೂರಿತರಾಗುತ್ತಾರೋ ಅಂತಹವರು ತಾನೇ ಜನ್ಮಮರಣಪ್ರವಾಹವನ್ನು ಎಂದೆಂದಿಗೂ ತಡೆಗಟ್ಟುವ ನಿನ್ನ ದಿವ್ಯವಾದ ಅಡಿದಾವರೆಗಳನ್ನು ಶೀಘ್ರವಾಗಿ ಸಾಕ್ಷಾತ್ಕರಿಸಿಕೊಳ್ಳುತ್ತಾರೆ!

ಅಪ್ಯದ್ಯ ನಸ್ತ್ವಂ ಸ್ವಕೃತೇಹಿತ ಪ್ರಭೋ
ಜಿಹಾಸಸಿ ಸ್ವಿತ್ಸುಹೃದೋಽನುಜೀವಿನಃ ।
ಯೇಷಾಂ ನ ಚಾನ್ಯದ್ಭವತಃ ಪದಾಂಬುಜಾತ್
ಪರಾಯಣಂ ರಾಜಸು ಯೋಜಿತಾಂಹಸಾಮ್ ॥

ಭಕ್ತರ ಎಲ್ಲ ಇಷ್ಟಾರ್ಥಗಳನ್ನೂ ಈಡೇರಿಸುವ ಪ್ರಭುವೇ! ನಿನ್ನವರಾಗಿ, ನಿನ್ನ ಸ್ನೇಹಿತರಾಗಿ ನಿನ್ನನ್ನೇ ಅವಲಂಬಿಸಿ ಬಾಳುತ್ತಿರುವ ನಮ್ಮನ್ನು ಈಗಲೇ ಬಿಟ್ಟು ಹೊರಟುಹೋಗಲು ಬಯಸುವೆಯಾ? ನಮಗೆ ನಿನ್ನ ಚರಣಾರವಿಂದಗಳನ್ನು ಬಿಟ್ಟು ಬೇರೆ ಯಾವ ಆಸರೆಯೂ ಇಲ್ಲ ಮತ್ತು ಭೂಮಿಯಲ್ಲಿರುವ ರಾಜರೆಲ್ಲರೂ ನಮಗೆ ವಿರೋಧಿಗಳಾಗಿಬಿಟ್ಟಿದ್ದಾರೆ. ಇದು ನಿನಗೆ ತಿಳಿದೇ ಇದೆ.

ಕೇ ವಯಂ ನಾಮರೂಪಾಭ್ಯಾಂ ಯದುಭಿಃ ಸಹ ಪಾಂಡವಾಃ।
ಭವತೋಽದರ್ಶನಂ ಯರ್ಹಿ ಹೃಷೀಕಾಣಾಮಿವೇಶಿತುಃ ॥

ಆತ್ಮನು ಎಲ್ಲ ಇಂದ್ರಿಯಗಳಿಗೂ ಧಾರಕನು ಮತ್ತು ಪ್ರೇರಕನು. ಅವನನ್ನು ಕಳೆದುಕೊಂಡ ಮೇಲೆ ಇಂದ್ರಿಯಗಳಿಗೆ ಯಾವ ಶಕ್ತಿ? ಎಲ್ಲಿಯ ಅಸ್ತಿತ್ವ? ಅಂತೆಯೇ ನಿನ್ನ ದಿವ್ಯದರ್ಶನವಾಗದಿದ್ದರೆ ಯಾದವರಿಗಾಗಲೀ, ಪಾಂಡವರಿಗಾಗಲೀ ಶಕ್ತಿ, ಕೀರ್ತಿ, ಸ್ವರೂಪ, ಅಸ್ತಿತ್ವ ಯಾವುದಾದರೂ ಹೇಗೆ ಇದ್ದೀತು?

ನೇಯಂ ಶೋಭಿಷ್ಯತೇ ತತ್ರ ಯಥೇದಾನಿಂ ಗದಾಧರ ।
ತ್ವತ್ಪದೈರಂಕಿತಾ ಭಾತಿ ಸ್ವಲಕ್ಷಣವಿಲಕ್ಷಿತೈಃ ॥

ಪ್ರಭೋ! ಗದಾಧರ! ನಿನ್ನ ದಿವ್ಯ ಪಾದಾರವಿಂದಗಳ ಅಸಾಧಾರಣ ಚಿಹ್ನೆಗಳಿಂದ ಈ ಪ್ರದೇಶವು ಎಷ್ಟು ಶೋಭಾಯಮಾನವಾಗಿದೆ! ನೀನು ಇಲ್ಲಿಂದ ಹೊರಟುಹೋದರೆ ಇಲ್ಲಿ ಯಾವ ಕಾಂತಿಯೂ ಇಲ್ಲವಾಗುವುದು.

# ಸೂಕ್ತಿಪ್ರಭ

## ಮಹಾತ್ಮರು

ಭಯಂಕರವಾದ ಸಂಸಾರಸಾಗರವನ್ನು ತಾವು ದಾಟಿದುದಲ್ಲದೆ, ಯಾವ ನಿಮಿತ್ತವೂ ಇಲ್ಲದೆ ಇತರರನ್ನೂ ದಾಟಿಸುವಂತಹವರೇ ಮಹಾತ್ಮರು. ಶಾಂತರೂ ಮಹನೀಯರೂ ಆದ ಈ ಸತ್ಪುರುಷರು ವಸಂತಋತುವಿನಂತೆ ಲೋಕಕಲ್ಯಾಣವನ್ನು ಮಾಡುತ್ತ ಇರುತ್ತಾರೆ. ಇತರರ ಶ್ರಮವನ್ನು ಪರಿಹರಿಸುವುದಕ್ಕೆ ತಾವಾಗಿಯೇ ಮುಂದೆ ಬರುವುದೇ ಮಹಾತ್ಮರ ಸ್ವಭಾವವಾಗಿದೆ. ಅದು ಹೇಗೆಂದರೆ, ಸೂರ್ಯನ ತೀಕ್ಷ್ಣವಾದ ಬಿಸಿಲಿನಿಂದ ಕಾದಿರುವ ಭೂಮಿಯನ್ನು ಚಂದ್ರನು ತಾನಾಗಿಯೇ ತಂಪು ಮಾಡಿ, ರಕ್ಷಿಸುತ್ತಾನಲ್ಲವೇ? ಹಾಗೆ ಮಹಾತ್ಮರು ಇರುತ್ತಾರೆ.

– ಶ್ರೀಶಂಕರಾಚಾರ್ಯರು

ಅನ್ಯರ ಅಲ್ಪಗುಣಗಳನ್ನು ಅಲಕ್ಷಿಸುವುದು ಮಹಾತ್ಮರ ಲಕ್ಷಣ. –ಭರ್ತೃಹರಿ

ಒಳ್ಳೆಯತನದ ವೈಭವವನ್ನು ಮಹಾತ್ಮರು ಮಾತ್ರವೇ ಅರಿಯಬಲ್ಲರು. – ಬುದ್ಧ

ಮಹಾಪುರುಷರು ತಮಗೆ ಬೇಕಾದುದನ್ನು ತಮ್ಮಲ್ಲೇ ಹುಡುಕಿಕೊಳ್ಳುತ್ತಾರೆ. ಕ್ಷುದ್ರರಾದವರು ತಮ್ಮ ಆವಶ್ಯಕತೆಗಾಗಿ ಇನ್ನೊಬ್ಬರಲ್ಲಿ ತಡಕಾಡುತ್ತಾರೆ. – ಕನ್‌ಫ್ಯೂಶಿಯಸ್

ನಿಜವಾದ ಸಂತನು ದಿವ್ಯ ಪರಿಸರ ಅಥವಾ ಚಿತ್ರದ ಹಾಗೆ ಇರುತ್ತಾನೆ. ಭಗವಂತನ ಅಪೂರ್ವವಾದ ಸೌಂದರ್ಯವೆಲ್ಲವೂ ಸಜೀವವಾಗಿ ಅವನ ವ್ಯಕ್ತಿತ್ವದಲ್ಲಿ ಚಿತ್ರಿಸಲ್ಪಟ್ಟಿರುತ್ತದೆ. ಅವನು ಭಗವಂತನ ಚೈತನ್ಯವನ್ನು ಧರಿಸಿರುತ್ತಾನೆ, ಆ ಅರಿವನ್ನು ಹೊಂದಿರುತ್ತಾನೆ ಮತ್ತು ಭಗವದಿಚ್ಛೆಯನ್ನು ಪ್ರತಿಬಿಂಬಿಸುತ್ತಿರುತ್ತಾನೆ. – ಟಿ. ವ್ಯಾಟ್ಸನ್

ಮಹಾತ್ಮರು ಭಗವಂತನ ಆಭರಣಗಳು. ಭಗವಂತನಿಂದ ಅನುಪಮ ರೀತಿಯಲ್ಲಿ ಗೌರವಿಸಲ್ಪಡುವವರು ಮತ್ತು ಅವನ ಪರಮಪ್ರೀತಿಗೆ ಪಾತ್ರರಾದವರು. ಭಗವಂತನ ಕೈಯಲ್ಲಿನ ರಾಜಕಿರೀಟವೇ ಅವರು. – ಹೆಚ್. ಎಲ್. ವೇಲ್ಯಾಂಡ್

ಮಹಾತ್ಮರ ಕಣ್ಣೀರು ಪಾಪಿಗಳೆಲ್ಲರ ಸಂತೋಷಗಾನಗಳಿಗಿಂತಲೂ ಅತ್ಯಂತ ಮಧುರವಾದುದು. – ಹೆರ್ರಿಕ್

ಸಂತನಿಗೂ ಪಾಪಿಗೂ ಇರುವ ಒಂದೇ ವ್ಯತ್ಯಾಸವೆಂದರೆ, ಪ್ರತಿಯೊಬ್ಬ ಸಂತನಿಗೂ ಒಂದು ಭೂತಕಾಲವಿರುತ್ತದೆ ಮತ್ತು ಪ್ರತಿಯೊಬ್ಬ ಪಾಪಿಗೂ ಭವಿಷ್ಯತ್ತು ತೆರೆದಿರುತ್ತದೆ.

– ಆಸ್ಕರ್ ವೈಲ್ಡ್